ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 64-68
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿ ಸುಸ್ಥಿರ ಅಭಿವೃದ್ಧಿ: ಗುರಿಗಳು ಮತ್ತು ಕಾಲಮಿತಿ

**ಅಶ್ವಿನಿ ಬಿ.ಎಸ್**
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಶ್ರೀ ಕುವೆಂಪು ಮಹಾವಿದ್ಯಾಲಯ ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ

**Abstract:**
*"ಭೂಮಿಯು ನಮ್ಮ ಅಗತ್ಯಕ್ಕೆ ಬೇಕಾದಷ್ಟು ಸಂಪನ್ಮೂಲಗಳನ್ನು ಹೊಂದಿದೆ ಆದರೆ ನಮ್ಮ ದುರಾಸೆ ಅಲ್ಲ." ಮಹಾತ್ಮ ಗಾಂಧೀಜಿಯವರ ಈ ಹೇಳಿಕೆ ಎಂದೆಂದಿಗೂ ಸತ್ಯ. ನಾಳಿನ ಅಗತ್ಯಗಳಿಗೆ ಧಕ್ಕೆಯಾಗದಂತೆ ಇಂದಿನ ಅಗತ್ಯಗಳನ್ನು ಪೂರೈಸುವುದೇ ಸುಸ್ಥಿರ ಅಭಿವೃದ್ಧಿಯ ಗುರಿಯಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ಪರಿಸರವು ಸುಸ್ಥಿರ ಅಭಿವೃದ್ಧಿಯ ಮೂರು ಆಧಾರಸ್ತಂಭಗಳಾಗಿವೆ. ಇದು ನಮ್ಮ ಮುಂದಿನ ಪೀಳಿಗೆಯ ಅಗತ್ಯತೆಗಳನ್ನು ಒದಗಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಉಳಿಸಿಕೊಳ್ಳಲು ಸಹಾಯ ಮಾಡುವ ಸಂಘಟನಾ ತತ್ವಗಳಾಗಿವೆ. ಇವುಗಳನ್ನು 2015ರಲ್ಲಿ ಅಳವಡಿಸಿಕೊಳ್ಳಲಾಗಿದೆ. ಬಡತನವನ್ನು ಕೊನೆಗಾಣಿಸಿ ಗ್ರಹವನ್ನು ರಕ್ಷಿಸುವ ಮತ್ತು 2030ರ ವೇಳೆಗೆ ಎಲ್ಲ ಜನರಿಗೆ ಶಾಲೆ, ಸಮೃದ್ಧಿಯನ್ನು ನೀಡುವುದಾಗಿದೆ ಇದಕ್ಕೆ ಕೇವಲ ಐದು ವರ್ಷಗಳು ಮಾತ್ರ ಬಾಕಿ ಇವೆ" ಈ ಹಿನ್ನೆಯಲ್ಲಿ ಪ್ರಸ್ತುತ ಲೇಖನದಲ್ಲಿ ಭಾರತದಲ್ಲಿ ಸುಸ್ಥಿರ ಅಭಿವೃದ್ಧಿ: ಗುರಿಗಳು ಮತ್ತು ಕಾಲಮಿತಿಯ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಸುಸ್ಥಿರ ಅಭಿವೃದ್ಧಿ, ಎಸ್‌ಡಿಜಿ, ಪರಿಸರ, ಸಂಪನ್ಮೂಲ, ಬಡತನ ನಿವಾರಣೆ.*

## ಪೀಠಿಕೆ

"ಪ್ರಕೃತಿಯಿಲ್ಲದೆ ನಮಗೆ ಏನೂ ಇಲ್ಲ, ಪ್ರಕೃತಿ ಇಲ್ಲದೆ, ನಾವು ಏನೂ ಅಲ್ಲ" 2022ರ ಕೋಪ್–15 ಜೀವವೈವಿಧ್ಯ ಶೃಂಗಸಭೆಯಲ್ಲಿ ಯು ಎನ್ ಸೆಕ್ರೆಟರಿ ಜನರಲ್ ಆಂಟೋನಿಯೊ ಗುಟೆರಸ್ ಅವರು ಹೇಳಿದ ಮಾತುಗಳಿವು. ಅವರು ಪ್ರಕೃತಿ ಮತ್ತು ಜೀವವೈವಿಧ್ಯತೆಯನ್ನು ರಕ್ಷಿಸಲು ತೆಗೆದು ಕೊಳ್ಳಬಹುದಾದ ಅಗತ್ಯ ಕ್ರಮಗಳ ಬಗ್ಗೆ ಒತ್ತಿ ಹೇಳದರು" 2030ರ ಕಾರ್ಯಸೂಚಿಯನ್ನು 2015ರಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಸೂಚಿಯು 17 ಗುರಿಗಳು 169 ಮಾನವೀಯ ಗುರಿಗಳನ್ನು ಒಳಗೊಂಡಿದೆ. ಮುಂದಿನ 15 ವರ್ಷದಲ್ಲಿ ಕ್ರಿಯೆಯನ್ನು ಉತ್ತೇಜಿಸಲು ಭಾರತ ಸೇರಿದಂತೆ 193 ರಾಷ್ಟ್ರಗಳು ಬದ್ಧವಾಗಿದ್ದವು. ಅದಕ್ಕೆ ಇನ್ನು ಐದು ವರ್ಷಗಳು ಇವೆ. ಈ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವಲ್ಲಿ ಭಾರತವು ನಿರ್ಣಾಯಕ ಪಾತ್ರವನ್ನು ಹೊಂದಿದೆ. ಏಕೆಂದರೆ ವಿಶ್ವದಲ್ಲಿ ಅತಿಹೆಚ್ಚು (17%) ಜನಸಂಖ್ಯೆಯನ್ನು ಹೊಂದಿದೆ. "ಸುಸ್ಥಿರ ಅಭಿವೃದ್ಧಿಯ ಗುರಿಗಳ ವ್ಯಾಖ್ಯಾವನ್ನು "ಬರ್ಟ್ಲೆಂಡ್ ಕಮಿಷನ್" ನೀಡುತ್ತದೆ. ಇವುಗಳು ಬಡತನ, ಹಸಿವು, ಏಡ್ಸ್, ಮಹಿಳೆಯರ ತಾರತಮ್ಯ, ಕೊನೆಗಾಣಿಸಲು ರೂಪಿಸಲಾಗಿದೆ.

***Please cite this article as:*** ಅಶ್ವಿನಿ, ಬಿ.ಎಸ್. (2025). ಭಾರತದಲ್ಲಿ ಸುಸ್ಥಿರ ಅಭಿವೃದ್ಧಿ: ಗುರಿಗಳು ಮತ್ತು ಕಾಲಮಿತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 4(2), 64–68

ಭಾರತವು 17 ಗುರಿಗಳಲ್ಲಿ 13 ಗುರಿಗಳನ್ನು ಸಾಧಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ.

2015–30 ಅವಧಿಯ ಸುಸ್ಥಿರ ಅಭಿವೃದ್ಧಿಗಳ ಧ್ಯೇಯವಾಕ್ಯ **"ಯಾರನ್ನು ಹಿಂದೆ ಬಿಡಬಾರದು"** ಈ ಗುರಿಗಳ "ಮಿಲೇನಿಯಮ್ ಡೆವಲಪ್‌ಮೆಂಟ್" ಗುರಿಗಳ ಪರ್ಯಾಯ ರೂಪವಾಗಿರುತ್ತದೆ. ಈ ಅಭಿವೃದ್ಧಿಯ ಗುರಿಗಳ ವರದಿಯನ್ನು ಇಂಗ್ಲೇಡಿನ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯ ತಯಾರಿಸಿದೆ.

**ಸುಸ್ಥಿರ ಅಭಿವೃದ್ಧಿಯ ಮೂಲ ಉದ್ದೇಶ: ಬಳಸಿ–ಉಳಿಸಿ–ರಕ್ಷಿಸಿ**

## ಸುಸ್ಥಿರ ಅಭಿವೃದ್ಧಿಯ ಗುರಿಗಳು

### *ಶೂನ್ಯ ಬಡತನ*

"ಬಡತನವನ್ನು ಅದರ ಎಲ್ಲ ರೂಪದಲ್ಲಿ ಎಲ್ಲಡೆ ಕೊನೆಗೊಳಿಸುವುದು" ಬಡತನವು ಒಂದು ಸಾಮಾಜಿಕ ಪಿಡುಗು ಪ್ರಪಂಚದಲ್ಲಿ 724 ಮಿಲಿಯನ್ ಜನರು ಬಡತನದಲ್ಲಿ ಜೀವಿಸುತ್ತಿದ್ದಾರೆ. ಸಾಂಕ್ರಾಮಿಕ ರೋಗ ರಷ್ಯಾ–ಉಕ್ರೇನ್ ಸಂಘರ್ಷ, ಇಸ್ರೇಲ್–ಪ್ಯಾಲೆಸ್ತೇನ್ ಸಮರ, ಕಾಳ್ಗಿಚ್ಚು, ಹವಮಾನ ಬದಲಾವಣೆಯಂತಹ ಅಂಶಗಳು ಬಡತನಕ್ಕೆ ಗಣನೀಯ ಬೆದರಿಕೆಯನ್ನು ಒಡ್ಡುತ್ತಿದೆ. 2024 SBJ ವರದಿಯ ಪ್ರಕಾರ ಭಾರತದ ಬಡತನ 5% ಇಳಿಕೆಯಾಗಿದೆ. South Sudan ಪ್ರಪಂಚದ ಅತೀ ಬಡ ರಾಷ್ಟ್ರವಾಗಿದೆ. ಲಕ್ಸಂಬರ್ಗ್ ಅತೀ ಶ್ರೀಮಂತ ರಾಷ್ಟ್ರ.

### *ಶೂನ್ಯ ಹಸಿವು*

2ನೇ ಗುರಿಯು 2030 ಹೊತ್ತಿಗೆ ಹಸಿವು ಮುಕ್ತ ಜಗತ್ತನ್ನು ರಚಿಸುವುದು. ಹಸಿವು ಮತ್ತು ಆಹಾರದ ಅಭದ್ರತೆಯ ಜಾಗತಿಕ ಸಮಸ್ಯೆಯು 2015 ರಿಂದ ಆಂತಕಕಾರಿಯಾಗಿದೆ. 2019–20 ರಲ್ಲಿ ಕಾಡಿದ ಕೋವಿಡ್ ದೇಶ ದೇಶಗಳ ನಡುವಿನ ಸಂಘರ್ಷ ಆಹಾರದ ಅಭದ್ರತೆಗೆ ಕಾರಣವಾಗಿದೆ. "ಹಸಿವನ್ನು ಕೊನೆಗಾಣಿಸಿ ಆಹಾರ ಭದ್ರತೆ ಮತ್ತು ಸುಧಾರಿತ ಪೋಷಣೆಯನ್ನು ಸಾಧಿಸಿ ಮತ್ತು ಸುಸ್ಥಿರ ಕೃಷಿಯನ್ನು ಉತ್ತೇಜಿಸುವುದಾಗಿದೆ" 2024ರ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು 105ನೇ ಸ್ಥಾನದಲ್ಲಿದೆ.

### *ಅಗತ್ಯ ಆರೋಗ್ಯ ಸೇವೆ*

"3ನೇ ಗುರಿಯು ಆರೋಗ್ಯಕರ ಜೀವನವನ್ನು ಖಚಿತಪಡಿಸಿಕೊಳ್ಳುವ ಮತತು ಎಲ್ಲ ಹಂತಗಳಲ್ಲಿ ಎಲ್ಲರಿಗೂ ಯೋಗಕ್ಷೇಮವನ್ನು ಉತ್ತೇಜಿಸುವುದಾಗಿದೆ. ಸುಸ್ಥಿರ ಅಭಿವೃದ್ಧಿಯ ಗುರಿಗಳು 2030ರ ವೇಳೆಗೆ ಏಡ್ಸ್, ಕ್ಷಯ, ಮಲೇರಿಯಾ ಮತ್ತು ಇತರ ಸಾಂಕ್ರಾಮಿಕ ರೋಗಗಳನ್ನು ಕೊನೆಗೊಳಿಸಲು ದಿಟ್ಟ ಬದ್ಧತೆಯನ್ನು ಹಾಕಿಕೊಂಡಿದೆ. Covid, HN, HNPV ಮುಂತಾದ ಸಾಂಕ್ರಾಮಿಕ ರೋಗಗಳಿಂದ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡಬೇಕಾಗಿದೆ.

### *ಶಿಕ್ಷಣ*

"ಶಿಕ್ಷಣವು ವ್ಯಕ್ತಿಯ ಪ್ರಬಲ ಅಸ್ತ್ರ, ಎಲ್ಲರಿಗೂ ಒಳಗೊಳ್ಳುವ ಮತ್ತು ಗುಣಮಟ್ಟದ ಶಿಕ್ಷಣವನ್ನು ಸಾಧಿಸುವುದು SDG 4 ನೇ ಗುರಿಯಾಗಿದೆ. 2030ರ ವೇಳೆಗೆ ಶಿಕ್ಷಣವು ಕೆಳಸ್ತರದ ವ್ಯಕ್ತಿಗೂ ತಲುಪುವಂತೆ ಮಾಡಲಾಗುವುದು. ಭಾರತವು 74% ಸಾಕ್ಷರತೆಯನ್ನು ಹೊಂದಿದೆ. 2024ರಲ್ಲಿ 80% ಕ್ಕೆ ತಲುಪಿದೆ. ಪ್ರಪಂಚದಲ್ಲಿ ಫಿನ್ ಲ್ಯಾಂಡ್, ಗ್ರೀನ್ ಲ್ಯಾಂಡ್ ಅತೀ ಹೆಚ್ಚು 100% ಸಕ್ಷರತೆ ಹೊಂದಿವೆ. ಮಾಲಿ, ಸೌತ್ ಸೂಡನ್ ಕಡಿಮೆ ಸಾಕ್ಷರತೆ ಹೊಂದಿವೆ. ಯುನಿಸೆಫ್ ಶಿಕ್ಷಣದ ಗುರಿಯನ್ನು ತಲುಪಲು ಸಹಾಯ ಮಾಡುತ್ತಿದೆ.

### *ಲಿಂಗ ಸಮಾನತೆ*

ಲಿಂಗ ಸಮಾನತೆಯು ಮೂಲಭೂತ ಮಾನವ ಹಕ್ಕು ಮಾತ್ರವಲ್ಲ ಶಾಂತಿಯುತ ಸಮೃದ್ಧ ಮತ್ತು ಸುಸ್ಥಿರ ಜಗತ್ತಿಗೆ ಅಗತ್ಯವಾದ ಅಡಿಪಾಯ ಆಗಿದೆ. ಪ್ರಪಂಚದಲ್ಲಿ ಅರ್ಧದಷ್ಟು ಜನಸಂಖ್ಯೆಯನ್ನು ಹೊಂದಿರುವ ಮಹಿಳೆಯರ ಅಸಮಾನತೆ ಒಂದು ಪಿಡುಗು ಆಗಿದೆ. ಮಹಿಳಾ ಪ್ರಾತಿನಿಧ್ಯವು ದೇಶದ ರಾಷ್ಟ್ರದ ಅಭಿವೃದ್ಧಿಗೆ ಮುಖ್ಯವಾಗಿದೆ. ವಿಶ್ವ ಆರ್ಥಿಕ ವೇದಿಕೆಯು ಬಿಡುಗಡೆ ಮಾಡಿರುವ ಲಿಂಗ ಅಂತರ

ಸೂಚ್ಯಂಕದಲ್ಲಿ 148 ದೇಶಗಳಲ್ಲಿ ಭಾರತ 129ನೆ ಸ್ಥಾನದಲ್ಲಿದೆ.

***ಶುದ್ಧ ನೀರು ಮತ್ತು ನೈರ್ಮಲ್ಯ***

2030ರ ವೇಳೆಗೆ ಎಲ್ಲರಿಗೂ ಸುರಕ್ಷಿತ ಮತ್ತು ಕೈಗೆಟುಕುವ ಕುಡಿಯುವ ನೀರಿನ ಸಾರ್ವತ್ರಿಕ ದೊರೆಯುವಿಕೆಯನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಜನಸಂಖ್ಯೆಯ ಬೆಳವಣಿಗೆ ನಗರೀಕರಣ ಮತ್ತು ಕೃಷಿ ಕೈಗಾರಿಕೆ ಮತ್ತು ಇಂಧನ ಕ್ಷೇತ್ರಗಳಿಂದ ನೀರಿನ ಬೇಡಿಕೆ ಹೆಚ್ಚುತ್ತಿದೆ.

***ಶುದ್ಧ ನೀರು ಮತ್ತು ನೈರ್ಮಲ್ಯ ಕೈಗೆಟುಕುವ ಶಕ್ತಿಮೂಲ***

ಎಲ್ಲರಿಗೂ ಕೈಗೆಟಕುವ ವಿಶ್ವಾಸಾರ್ಹ ಸಮರ್ಥನೀಯ ಮತ್ತು ಆಧುನಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು. ಇದು ಕೃಷಿ, ವ್ಯಾಪಾರ. ಸಂವಹನ, ಶಿಕ್ಷಣ ಆರೋಗ್ಯ ಮತ್ತು ಸಾರಿಗೆಯ ಅಭಿವೃದ್ಧಿಗೆ ಪ್ರಮುಖವಾಗಿವೆ. ಜನರು ವಿದ್ಯುಚ್ಛಕ್ತಿಯನ್ನು ಹೊಂದಿಲ್ಲ. ಬಯೋನರಿ ಇಂದು ಅತಿ ದೊಡ್ಡ ನವೀಕರಿಸಬಹುದಾದ ಶಕ್ತಿಯ ಮೂಲವಾಗಿದೆ.

***ಸುಸ್ಥಿರ ಆರ್ಥಿಕ ಬೆಳವಣಿಗೆ***

8ನೇ ಗುರಿಯು ಎಲ್ಲರನ್ನು ಒಳಗೊಳ್ಳುವ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ ಉದ್ಯೋಗ ಮತ್ತು ಯೋಗ್ಯ ಕೆಲಸವನ್ನು ಉತ್ತೇಜಿಸುವುದು. ಉದ್ಯೋಗಾವಕಾಶವನ್ನು ಹೆಚ್ಚಿಸಲು ವಿಶೇಷವಾಗಿ ಯುವ ಜನರಿಗೆ ಔಪಚಾರಿಕ ಉದ್ಯೋಗ ಮತ್ತು ಕಾರ್ಮಿಕ ಮಾರುಕಟ್ಟೆಯ ಅಸಮಾನತೆಯನ್ನು ನಿರ್ಮೂಲನೆ ಮಾಡುವುದಾಗಿದೆ.

***ಕೈಗಾರೀಕರಣ ನಾವೀನ್ಯತೆ ಮೂಲಸೌಕರ್ಯ***

9ನೇ ಗುರಿಯು ಸುಸ್ಥಿರ ಮೂಲ ಸೌಕರ್ಯ ಸುಸ್ಥಿರ ಕೈಗಾರಿಕೆ ನಾವೀನ್ಯತೆಯನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ. ಮೂಲ ಸೌಕರ್ಯ ಮತ್ತು ನಾವಿನ್ಯತೆಗಳಲ್ಲಿನ ಹೊಡಿಕೆಯು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ನಿರ್ಣಾಯಕ ಅಂಶಗಳಾಗಿವೆ.

***ಅಸಮಾನತೆ***

9ನೇ ಗುರಿಯು ಅಸಮಾನತೆಯನ್ನು ಕಡಿಮೆ ಮಾಡುವುದಾಗಿದೆ. ಅಸಮಾನತೆಯು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮಾರಕವಾಗಿದೆ. ಸಾಂಕ್ರಮಿಕ ರೋಗವು ಮೂರು ದಶಕಗಳಲ್ಲಿ ದೇಶದ ನಡುವಿನ ಅಸಮಾನತೆಯ ಹೆಚ್ಚಳಕ್ಕೆ ಕಾರಣವಾಗಿದೆ. ದೇಶಗಳ ಒಳಗೆ ಮತ್ತು ದೇಶಗಳ ನಡುವಿನ ಅಸಮಾನತೆಯನ್ನು ಕಡಿಮೆ ಮಾಡುವುದು. ಸಂಪನ್ಮೂಲ ವಿತರಣೆ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯಲ್ಲಿ ಹೂಡಿಕೆ ಸಾಮಾಜಿಕ ರಕ್ಷಣೆ ಅಗತ್ಯವಾಗಿದೆ.

***ಸುಸ್ಥಿರ ಬಳಕೆ ಮತ್ತು ಉತ್ಪಾದನೆ***

11ನೇ ಗುರಿಯು ಮಾನವ ಸಮುದಾಯಗಳನ್ನು ಒಳಗೊಂಡಿರುವ ಸುರಕ್ಷಿತ ಸ್ಥಿತಿಸ್ಥಾಪಕ ಮತ್ತು ಸಮರ್ಥನೀಯ ನಗರಗಳನ್ನು ಸ್ಥಾಪಿಸುವುದಾಗಿದೆ. ನಗರಗಳು ಜಾಗತಿಕ ಜೀವನದ ಭವಿಷ್ಯವನ್ನು ಪ್ರತಿನಿಧಿಸುತ್ತವೆ. 2024ರಲ್ಲಿ 8 ಶತಕೋಟಿಯನ್ನು ತಲುಪಿದೆ.

***ಸುಸ್ಥಿರ ಬಳಕೆ ಮತ್ತು ಉತ್ಪಾದನೆ***

ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ನಾವು ಸರಕುಗಳು ಮತ್ತು ಸಂಪನ್ಮೂಲಗಳನ್ನು ಉತ್ಪಾದಿಸುವ ಮತ್ತು ಬಳಸುವ ವಿಧಾನವನ್ನು ಬದಲಾಯಿಸುವ ಮೂಲಕ ಪರಿಸರದ ಮೇಲಿನ ದುಷ್ಪರಿಣಾಮಗಳನ್ನು ಕಡಿಮೆ ಮಾಡುವ ಅಗತ್ಯವಿದೆ. 12ನೇ ಗುರಿಯನ್ನು ಸಾಧಿಸಲು ನೈಸರ್ಗಿಕ ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಮತ್ತು ವಿಷಕಾರಿ ತ್ಯಾಜ್ಯ ಮಾಲಿನ್ಯಕಾರಕಗಳನ್ನು ವಿಲೇವಾರಿ ಮಾಡಲು ಪ್ರೋತ್ಸಾಹಿಸಬೇಕು.

***ಹವಮಾನ ಬದಲಾವಣೆ***

ಸುಸ್ಥಿರ ಅಭಿವೃದ್ಧಿ ಗುರಿ 13 ಹವಮಾನ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ

ಒತ್ತಾಯಿಸುತ್ತದೆ. ಹವಮಾನ ಬದಲಾವಣೆಯು ಪ್ರತಿಯೊಂದು ಖಂಡವನ್ನು ಭಾದಿಸುತ್ತದೆ. ಇತ್ತೀಚಿನ ಜಲ್ವಂತ ಉದಾಹರಣೆ ಎಂದರೆ ಲಾಸ್ ಎಂಜಲೀಸ್‌ನಲ್ಲಿ ಸಂಬಂಧಿಸಿದ ಸಂತಾ ಅನಾ ಕಾಳ್ಗಿಚ್ಚು ಇದರಿಂದಾಗಿ ಅನೇಕ ಜನರು ಬೀದಿಗೆ ಬಂದರು. ಮಾನವನ ದುರಾಸೆಯ ಚಟುವಟಿಕೆಗಳು ಹವಮಾನ ಬದಲಾವಣೆಗೆ ಪ್ರಮುಖ ಕಾರಣಗಳಾಗಿವೆ.

***ಸಮುದ್ರ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಮರ್ಥ ಬಳಕೆ***

14ನೇ ಗುರಿಯು ಸಾಗರಗಳು ಸಮುದ್ರಗಳು ಮತ್ತು ಸಮುದ್ರ ಸಂಪನ್ಮೂಲಗಳನ್ನು ಸಂರಕ್ಷಿಸುವುದಾಗಿದೆ. ಆರೋಗ್ಯಕರ ಸಾಗರಗಳು ಮತ್ತು ಸಮುದ್ರಗಳು ಭೂಮಿಯ ಮೇಲಿನ ಮಾನವ ಅಸ್ತಿತ್ವ ಮತ್ತು ಜೀವನಕ್ಕೆ ಅತಗತ್ಯ. ಭೂಮಿಯು 97% ನೀರನ್ನು ಹೊಂದಿದ್ದು ಸಮುದ್ರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಪ್ಲಾಸ್ಟಿಕ್ ಸಮುದ್ರ ಮಾಲಿನ್ಯದ ಅತ್ಯಂತ ಹಾನಿಕಾರಕ ತ್ಯಾಜ್ಯವಾಗಿದೆ.

***ಭೂಮಿಯ ಮೇಲಿನ ಜೀವ ರಕ್ಷಣೆ***

15ನೇ ಗುರಿಯು ಭೂಮಿಯ ಮೇಲಿನ ಜೀವವನ್ನು ರಕ್ಷಿಸುವ ಬಗ್ಗೆ ತಿಳಿಸುತ್ತದೆ ಇದು ಭೂಮಿಯ ಮೇಲಿನ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವುದು ಮತ್ತು ಪುನಃ ಸ್ಥಾಪಿಸುವುದು ಅರಣ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದು ಮರುಭೂಮೀಕರಣವನ್ನು ಎದುರಿಸುವುದು ಮತ್ತು ಭೂಮಿಯ ಅವನತಿಯನ್ನು ನಿಲ್ಲಿಸುವುದಾಗಿದೆ.

***ನ್ಯಾಯಯುತ ಶಾಂತಿಯುತ ಮತ್ತು ಅಂತರ್ಗತ ಸಮಾಜವನ್ನು ಉತ್ತೇಜಿಸುವುದು***

16ನೇ ಗುರಿಯು ಎಲ್ಲರಿಗೂ ಶಾಂತಿಯುತ ಮತ್ತು ಅಂತರ್ಗತ ಸಮಾಜಗಳನ್ನು ಸೃಷ್ಟಿಸುವುದಾಗಿದೆ. ಎಲ್ಲೆಡೆಯೂ ಜನರು ಎಲ್ಲ ರೀತಿಯ ಹಿಂಸಾಚಾರದಿಂದ ಮುಕ್ತರಾಗಿರಬೇಕು ಮತ್ತು ತಮ್ಮ ಜನಾಂಗೀಯತೆ ನಂಬಿಕೆ ಅಥವಾ ಲೈಂಗಿಕ ದೃಷ್ಟಿಕೋನ ಏನೇ ಇರಲಿ ತಮ್ಮ ಜೀವನವನ್ನು ನಡೆಸುತ್ತಿರುವಾಗ ಸುರಕ್ಷಿತವಾಗಿರಬೇಕು.

***ಜಾಗತಿಕ ಪಾಲುಗಾರಿಕೆಯ ಪುನಶ್ಚೇತನ***

2030ರ ಕಾರ್ಯಸೂಚಿಯು ಸಾರ್ವತ್ರಿಕವಾಗಿದೆ ಮತ್ತು ಯಾರು ಹಿಂದುಳಿದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಎಲ್ಲ ದೇಶಗಳು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಕ್ರಮಕ್ಕೆ ಕರೆ ನೀಡಿವೆ. ಇದಕ್ಕೆ ಸರ್ಕಾರಗಳು ಖಾಸಗಿ ವಲಯ ಮತ್ತು ನಾಗರಿಕ ಸಮಾಜದ ನಡುವಿನ ಪಾಲುದಾರಿಕೆಯು ಅಗತ್ಯವಿದೆ.

**ಸುಸ್ಥಿರ ಅಭಿವೃದ್ಧಿಯ ಜಾಗತಿಕ ಕ್ರಮಗಳು**

- ಸ್ಟಾಕ್ ಹೋಮ್ ಸಮ್ಮೇಳನ–1972 ಇದು ಜಾಗತಿಕ ಕಾರ್ಯಸೂಚಿಯಲ್ಲಿ ಪರಿಸರ ಕಾಳಜಿಯ ಮೊದಲ ಹೆಜ್ಜೆಯಾಗಿದೆ.
- ಕ್ಯೂಟೊ ಪ್ರೋಟೋಕಾಲ್–1997
- ರಾಮ್ಸರ್ ಸಮಾವೇಶ – 1971
- ವಿಯೆನ್ನಾ ಸಮಾವೇಶ – 1986
- ಮಾಂಟ್ರಿಯಾಲ್ ಪ್ರೋಟೋಕಾಲ್ – 1987
- ಪ್ಯಾರಿಸ್ ಒಪ್ಪಂದ –2015
- COP ಸಭೆಗಳು

ಸುಸ್ಥಿರ ಅಭಿವೃದ್ಧಿಯ ಪ್ರಕ್ರಿಯೆಯನ್ನು ಕಾರ್ಯ ಸಾಧ್ಯವಾಗಿಸಲು ಭೌಗೋಳಿಕತೆ, ಸಮಾಜ, ಅರ್ಥಶಾಸ್ತ್ರ, ವಿಜ್ಞಾನದ ಮಟ್ಟಕ್ಕೆ ಸಂಬಂಧಿಸಿದಂತೆ ವೈವಿಧ್ಯತೆಯ ಅರಿತು ವಿಶ್ವದಾದ್ಯಂತ ಅಭಿವೃದ್ಧಿಯಲ್ಲಿ ಭಾಗಹಿಸುವವರ ವಿವಿಧ ದೃಷ್ಟಿಕೋನ ಮತ್ತು ಪ್ರಯತ್ನಗಳನ್ನು ಸಂಯೋಜಿಸಬೇಕಿದೆ. 15ವರ್ಷಗಳ ನಿಗದಿತ ಸಮಯದಲ್ಲಿ 10 ವರ್ಷ ಕಳೆದಿದ್ದು ಅದರ ಗುರಿಗಳನ್ನು ಪೂರೈಸಲು ಐದು ವರ್ಷಗಳಿವೆ. ಬಡತನ ತೊಡೆದು ಹಾಕಲು ಆರೋಗ್ಯವನ್ನು ಸುಧಾರಿಸಲು ಅಸಮಾನತೆ ಮಹಿಳಾ ಸಬಲೀಕರಣ ರಾಷ್ಟ್ರದ ಪ್ರಗತಿಗೆ ಪೂರಕವಾಗಿದೆ.

## ಪರಾಮರ್ಶನ ಗ್ರಂಥಗಳು

- Blewitt, John (2018). *Understanding Sustainable Development* (3rd ed.). Routledge.
- Costanza, R. et al. (2014). *Development: Time to leave GDP behind*. *Nature*, 505**,** 283–285. https://doi.org/10.1038/505283a
- Griggs, D. et al**.** (2013). *Policy: Sustainable development goals for people and planet*. *Nature*, 495**,** 305–307. https://doi.org/10.1038/495305a
- Leal Filho, Walter (Ed.) (2020). *Partnerships for the Goals: SDG17 in the 2030 Agenda for Sustainable Development*. Springer.
- Nilsson, M., Griggs, D., & Visbeck, M. (2016). *Policy: Map the interactions between Sustainable Development Goals*. *Nature*, 534**,** 320–322. https://doi.org/10.1038/534320a
- Sachs, Jeffrey D**.** (2015). *The Age of Sustainable Development*. Columbia University Press.
- Sachs, Jeffrey D. (2019). *SDG Guide: From the Global Agenda to National Action*. Sustainable Development Solutions Network (SDSN).
- Sustainable Development Solutions Network (SDSN) (2023). *Global Sustainable Development Report*. https://www.sdgindex.org/
- United Nations (2015). *Transforming our World: The 2030 Agenda for Sustainable Development*.
- United Nations Development Programme (UNDP)**.** (2021). *Human Development Report: Uncertain Times, Unsettled Lives*. https://hdr.undp.org/

**Additional sources**

- FAO (2021). *The State of Food and Agriculture*.
- IPCC Reports – essential for environmental aspects of SDGs.
- OECD (2019). *Measuring Distance to the SDG Targets 2019*.
- UNESCO (2020). *Education for Sustainable Development Goals: Learning Objectives*.
- World Bank (2020). *World Development Report*.